UASB LIBRARY
Newspaper Clippings

Pg .1 Wednesday 01-12-2021 **Jai Kisan**



ಎಂಎಸ್‌ಪಿ ಸುತ್ತಮುತ್ತ

ಕಾನೂನಿಗೆ ರೈತರ ಪಟ್ಟು | ಸರ್ಕಾರದಿಂದ ಸಮಿತಿ ರಚನೆ

ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಎಂಬ ಸೂತ್ರ

ಸುದ್ದಿ ಸಮಗ್ರ

ನವದೆಹಲಿ: ದೆಹಲಿಯ ಗಡಿ ಭಾಗದಲ್ಲಿ ಕಳೆದ ಒಂದು ವರ್ಷದಿಂದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ನೇತೃತ್ವದಲ್ಲಿ ರೈತ ಸಂಘಟನೆಗಳು ಕೃಷಿಗೆ ಸಂಬಂಧಿಸಿದ ಮೂರು ಕಾನೂನುಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದವು. ರಾಷ್ಟ್ರದ ಹಿತದೃಷ್ಟಿಯಿಂದ ಈ ಕಾನೂನುಗಳನ್ನು ಹಿಂಪಡೆದಿರುವುದಾಗಿ ಸರ್ಕಾರ ಘೋಷಿಸಿದೆ. ಈಗ ಎಲ್ಲ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಗೊಳಿಸುವ ಕಾನೂನು ಜಾರಿಗೊಳಿಸಬೇಕು ಎಂಬ ರೈತರ ಬೇಡಿಕೆ ಮುನ್ನೆಲೆಗೆ ಬಂದಿದೆ. ಎಂಎಸ್‌ಪಿಗೆ ಇರುವ ಕಾನೂನು ಬದ್ಧತೆಯ ವಿಚಾರವೂ ಚರ್ಚೆಗೆ ಗ್ರಾಸವಾಗಿದೆ.

ಎಷ್ಟು ಬೆಳೆಗಳಿಗೆ ಬೆಂಬಲ ಬೆಲೆ?: ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಎಂಬ ಸೂತ್ರದಲ್ಲಿ ಸರ್ಕಾರ ಪ್ರತಿವರ್ಷ 23 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುತ್ತದೆ. ಪ್ರಸ್ತುತ ಈ ಬೆಂಬಲ ಬೆಲೆ ಕಡ್ಡಾಯಗೊಳಿಸುವ ಕಾನೂನು ಆಗಿಲ್ಲ ಅಥವಾ ಇದಕ್ಕೆ ಕಾನೂನು ಮಾನ್ಯತೆ ಒದಗಿಸುವ ನಿಯಮವೂ ಇಲ್ಲ.

ಉತ್ಪಾದನಾ ವೆಚ್ಚದಲ್ಲಿ ಬೀಜ, ರಸಗೊಬ್ಬರ, ಕೀಟನಾಶಕ, ಇಂಧನ, ನೀರಾವರಿ, ಕೂಲಿ ಕಾರ್ಮಿಕರು ಮತ್ತು ಗೇಣಿಗೆ ಪಡೆದ ಜಮೀನು ಮತ್ತು ಕುಟುಂಬದವರ ಪಾವತಿ ರಹಿತ ಕೆಲಸ ಕೂಡ ಸೇರಿಕೊಂಡಿದೆ. ಕೃಷಿಕರ ರಾಷ್ಟ್ರೀಯ ಆಯೋಗ ಶಿಫಾರಸು ಮಾಡಿದಂತೆ ಉತ್ಪಾದನಾ ವೆಚ್ಚದಲ್ಲಿ ಸಮಗ್ರ ವೆಚ್ಚದ ಲೆಕ್ಕಾಚಾರವಾಗಬೇಕು. ಇದರಲ್ಲಿ ಸ್ವಂತ ಜಮೀನಿನ ಮೇಲೆ ತೆಗೆದುಕೊಂಡ ಸಾಲದ ಬಡ್ಡಿ, ಬಂಡವಾಳ ಇವೆಲ್ಲವೂ ಸೇರಬೇಕು ಎಂಬುದು ರೈತರ ಬೇಡಿಕೆ. ಸರ್ಕಾರ ಮೂರನೇ ಒಂದಂಶ ಗೋಧಿ ಮತ್ತು ಅಕ್ಕಿಯನ್ನು ಖರೀದಿಸುತ್ತದೆ. ಬೇಳೆಕಾಳು ಮತ್ತು ಎಣ್ಣೆ ಬೀಜಗಳ ಖರೀದಿ ಪ್ರಮಾಣ ಶೇಕಡ 10, ಶೇಕಡ 20. ಶಾಂತ ಕುಮಾರ್ ಸಮಿತಿಯ 2015 ವರದಿ ಪ್ರಕಾರ ಶೇಕಡ 6ರಷ್ಟು ಕೃಷಿ ಕುಟುಂಬಗಳು ಮಾತ್ರವೇ ಎಂಎಸ್‌ಪಿ ದರದಲ್ಲಿ ಸರ್ಕಾರಕ್ಕೆ ಗೋಧಿ ಮತ್ತು ಅಕ್ಕಿ ಮಾರಾಟ ಮಾಡುತ್ತವೆ. ಕಳೆದ ಕೆಲವು ವರ್ಷಗಳಿಂದ ಈ ಪ್ರಮಾಣದಲ್ಲಿ ಏರಿಕೆಯಾಗಿದೆ.



ಸರ್ಕಾರದ ನಿಲುವು ಏನು?

ಪ್ರಧಾನಮಂತ್ರಿ ನರೇಂದ್ರ ಮೋದಿ ಎಂಎಸ್‌ಪಿಯನ್ನು ಇನ್ನಷ್ಟು ಪಾರದರ್ಶಕವಾಗಿಸುವುದಕ್ಕೆ ಸಮಿತಿಯನ್ನು ರಚಿಸುತ್ತಿರುವುದಾಗಿ ಘೋಷಿಸಿದ್ದರು. ಬೆಳೆಗಳಿಂದ ಬೆಳೆಗಳಿಗೆ ಇದು ವ್ಯತ್ಯಸ್ತವಾಗಿರಲಿದೆ. ಶೂನ್ಯ ಬಂಡವಾಳ ಕೃಷಿಗೆ ಉತ್ತೇಜನ ನೀಡುವ ಅಂಶವನ್ನು ಕೂಡ ಅವರು ಪ್ರತಿಪಾದಿಸಿದ್ದರು. ಸಮಿತಿಯಲ್ಲಿ ಕೃಷಿಕರ ಗುಂಪುಗಳು ಇರಲಿದ್ದು, ರಾಜ್ಯ, ಕೇಂದ್ರ ಸರ್ಕಾರದ ಪ್ರತಿನಿಧಿಗಳು, ಕೃಷಿ ವಿಜ್ಞಾನಿಗಳು, ಆರ್ಥಶಾಸ್ತ್ರಜ್ಞರು ಕೂಡ ಇರುತ್ತಾರೆ.

ಕಾನೂನು ಬೇಕೆಂಬ ಬೇಡಿಕೆ ಯಾಕೆ?

ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿರುವ ಎಸ್‌ಕೆಎಂ, ಸಮಗ್ರ ವೆಚ್ಚ +50% ಎಂಬ ಸೂತ್ರದ ಪ್ರಕಾರವೇ ಎಲ್ಲ ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ನಿರ್ಧಾರವಾಗಬೇಕು. ಕೃಷಿ ಉತ್ಪನ್ನಗಳ ಬೆಲೆ ನಿಗದಿಗೆ ಕಾನೂನುಬದ್ಧತೆಯನ್ನು ಒದಗಿಸಬೇಕು. ಪ್ರತಿಕೃಷಿಕರಿಗೂ ಇದರ ಪ್ರಯೋಜನ ಲಭ್ಯವಾಗಬೇಕು ಎಂಬ ಬೇಡಿಕೆ ಮುಂದಿರಿಸಿದೆ. ಎಸ್‌ಕೆಎಂ ಬಣದೊಳಗೆ ಈ ವಿಚಾರವಾಗಿ ವಿಭಿನ್ನ ನಿಲುವುಗಳಿವೆ ಎಂಬುದೂ ವಾಸ್ತವ. ಈಗ ಚಾಲ್ತಿಯಲ್ಲಿರುವ ಎಂಎಸ್‌ಪಿಯ ಬಹುಪಾಲು ಪ್ರಯೋಜನ ಪಂಜಾಬ್ ಮತ್ತು ಹರಿಯಾಣಗಳಿಗೆ ಮಾತ್ರ ಸೀಮಿತವಾಗಿದೆ. ಇದನ್ನು 15 ಬಿನ್ನ ಕೃಷಿ ಹವಾಮಾನ ವಲಯಗಳಿಗೆ ವಿಂಗಡಿಸಿ ನೀಡಬೇಕು ಎಂಬುದು ಭಾರತೀಯ ಕಿಸಾನ್ ಸಂಘದ ಬೇಡಿಕೆ.

01-12-2021 Vv Pg 09

ಕೃಷಿಯಲ್ಲಿ ಕಳೆ ನಿರ್ವಹಣೆ



ನಗರ ವಾಸಿಗಳಿಗೆ ಕಸ ವಿಲೇವಾರಿಯು ತಲೆನೋವಾದಂತೆ ಕೃಷಿಕರಿಗೆ ಕಸ/ಕಳೆಗಳ ವಿಲೇವಾರಿ ತಲೆನೋವಾಗಿದೆ. ಕಳೆಗಳನ್ನು ಅಂತರ ಬೇಸಾಯ, ಯಾಂತ್ರಿಕವಾಗಿ, ಕೈಗಳಂದ, ಕಳೆನಾಶಕಗಳಿಂದ ನಿಯಂತ್ರಣ ಮಾಡಬಹುದಾಗಿದೆ.

ಬಿಳಿ ಕಸ

ಈ ಕಳೆಯ ಕುಟುಂಬಕ್ಕೆ ಸೇರಿದ 24 ಸಂತತಿಗಳಲ್ಲಿ "ಸ್ಪೈನಿಗಾ ಏಸಿಯಾಟಿಕಾ" ಎಂಬುದು ಬೇರು ಪರಾವಲಂಬಿಯಾಗಿ ಜೋಳ, ಸಜ್ಜೆ, ಕಬ್ಬು, ಭತ್ತ, ಮುಸುಕಿನ ಜೋಳ ಮತ್ತು ಕೆಲವು ಹುಲ್ಲುಗಳೊಂದಿಗೆ (ಮಾರವೆಲ್) ಬೆಳೆಯುತ್ತದೆ. ಮುಖ್ಯ ಬೆಳೆಯ ಬೇರಿನಿಂದ ಪೋಷಕಾಂಶಗಳನ್ನು ಪೀರಿ ಬೆಳೆಯುತ್ತದೆ. ಇದರಿಂದ ಮುಖ್ಯ ಬೆಳೆಯ ಬೆಳವಣಿಗೆಯು ಭಾರೀ ಪ್ರಮಾಣದಲ್ಲಿ ಕುಂಠಿತಗೊಳ್ಳುತ್ತದೆ.

ಭೂಮಿಯಲ್ಲಿನ್ನು ಆಳವಾಗಿ ಉಳುಮೆ ಮಾಡುವುದು ಹಾಗೂ ಮೇಲಿಂದ ಮೇಲೆ ಬೆಳೆ ಪರಿವರ್ತನೆ ಮಾಡುವುದು. ಜಮೀನು, ಬದು ಮತ್ತು ಕಾಲುವೆಗಳಲ್ಲಿ ಬಿಳಿ ಕಸ ಇಲ್ಲದಂತೆ ಎಚ್ಚರವಹಿಸಿ, ಬಿಳಿ ಕಸವನ್ನು ಹೂವು ಬಿಡುವ ಮೊದಲೇ ಕಿತ್ತು ಹಾಕುವುದು. ಬಿಳಿ ಕಸ ಹೂ ಬಿಡುವ ಸಮಯದಲ್ಲಿ ನೀರು ಹಾಯಿಸಿ, ಎರಡು ದಿನಗಳವರೆಗೆ ನೀರು ನಿಲ್ಲಿಸುವುದು. ಹೆಕ್ಟೇರಿಗೆ 2.5 ಕಿ.ಗ್ರಾಂ 2-4-ಡಿ ಸೋಡಿಯಂ ಲವಣವನ್ನು 1000 ಲೀ. ನೀರಿನಲ್ಲಿ ಬೆರೆಸಿ ಬಿಳಿ ಕಸ ಇರುವ ಪ್ರದೇಶದಲ್ಲಿ ಸಿಂಪಡಿಸಬೇಕು. ಜೋಳ ಮತ್ತು ಬೇಳೆಕಾಳುಬೆಳೆಗಳನ್ನು ಮಿಶ್ರಬೆಳೆಯಾಗಿ ಬೆಳೆಯುವಾಗ ಈ ಸಿಂಪರಣೆಯನ್ನು ಮಾಡಬಾರದು.

ಪಾರ್ಥೇನಿಯಂ ಕಸ

ಇದನ್ನು ನಿಯಂತ್ರಿಸಲು ಪ್ರತಿ ಹೆಕ್ಟೇರ್ ಪ್ರದೇಶಕ್ಕೆ 2.5 ಕಿ.ಗ್ರಾಂ 2-4-ಡಿ ಸೋಡಿಯಂ ಲವಣವನ್ನು 1000 ಲೀ. ನೀರಿನಲ್ಲಿ ಬೆರೆಸಿ ಕಳೆಯು ಚಿಗುರಾದ್ದಾಗ ಸಿಂಪರಣೆ ಮಾಡಬೇಕು.ಕಳೆಯು ದೊಡ್ಡ ಸಸ್ಯವಾಗಿದ್ದಾಗ 7.5 ಲೀಟರ್ 2-4-ಡಿ ಅಮೈನ್, 2.5 ಲೀಟರ್ ಟೇಪಾಲ್ ಮತ್ತು 5 ಕಿ.ಗ್ರಾಂ ಯೂರಿಯಾವನ್ನು 1000 ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಕೆಲವೇ ದಿನಗಳು ಇದ್ದಲ್ಲಿ ಕೈಯಿಂದ ಕಿತ್ತು ಹಾಕಬೇಕು. ಕಿತ್ತು ಹಾಕುವಾಗ ಗಿಡದ ಯಾವ ಭಾಗವೂ ಶರೀರದ ಭಾಗಗಳಿಗೆ ತಗುಲದಂತೆ ಎಚ್ಚರವಹಿಸುವುದು ಮುಖ್ಯ.

ಕರಿಕೆ, ಜೇಕು ಕಸ

ಇದರ ನಿಯಂತ್ರಣಕ್ಕೆ ಪ್ರತಿ ಲೀಟರ್ ನೀರಿಗೆ 12 ರಿಂದ 15 ಮಿ.ಲೀ.ಗ್ಲೈಫೋಸೇಟ್-41ಇ.ಸಿಅಥವಾಪ್ಯಾರಾಕ್ವಾಟ್-24 ಇ.ಸಿ ಹಾಗೂ 20 ಗ್ರಾಂ ಯೂರಿಯಾ ಅಥವಾ 6 ಗ್ರಾಂ ಅಮೋನಿಯಂ ಸಲ್ಫೇಟ್‌ನ್ನು ಬೆರೆಸಿಡ್ಯೂಎಫ್.ಎಸ್-40 ಅಥವಾ ಪಿ.ಎಲ್.ವಿ-200 ನಾಝುಲ್‌ನ್ನು ಕೈಚಾಲಿತ ಪಂಪಿಗೆ ಜೋಡಿಸಿ ಈ ಕಳೆಗಳಿವೆರಿಸಿದಂತೆ ಮೂರು ಬಾರಿ ಸಿಂಪರಣೆ ಮಾಡಬೇಕು.ಮೊದಲನೆಯ ಸಿಂಪರಣೆಯನ್ನು ಮುಂಗಾರು ಮಳೆಯಾದ ನಂತರ ಕರಿಕೆಯು 10-15 ಸೆಂ.ಮೀ. ಎತ್ತರವಾಗಿ ಬೆಳೆದು ಹೆಚ್ಚು ಹಸುರಾಗಿದ್ದಾಗ ಕರಿಕೆಗೆ ಮಾತ್ರ ತಗಲುವಂತೆ ಸಿಂಪರಣೆ ಮಾಡಬೇಕು.ಎರಡನೆಯ ಸಿಂಪರಣೆಯನ್ನು ಮೊದಲನೆಯ ಸಿಂಪರಣೆಯ 90 ದಿನಗಳ ನಂತರ ಪುನಃ ಚಿಗುರಿ ಹುಲುಸಾಗಿ ಬೆಳೆದ ಕರಿಕೆಯ ಮೇಲೆ ಮಾತ್ರ ಸಿಂಪರಣೆ ಮಾಡಬೇಕು.ಮೂರನೆಯಹಾಗೂಕೊನೆಯ ಸಿಂಪರಣೆಯನ್ನು ಎಲ್ಲೆಲ್ಲಿ ಕರಿಕೆ ಚಿಗುರಿ ಹುಲುಸಾಗಿ ಬೆಳೆದಿದೆಯೋ ಆಲ್ಲೆಲ್ಲಮಾತ್ರ ಸಿಂಪರಣೆ ಮಾಡಬೇಕು.

ಗ್ಲೈಫೋಸೇಟ್-41 ಎಸ್.ಎಲ್. ಬದಲಾಗಿ ಗ್ಲೈಫೋಸೇಟ್ ಕೇ.71 (ಹರಳು) ಸಿಂಪರಣೆ ಮಾಡಿ (6 ಗ್ರಾಂ ಪ್ರತಿ ಲೀಟರ್ ನೀರಿಗೆ) ಕರಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದಾಗಿದೆ. ಸಿಂಪರಣೆ ಮಾಡಿದ 15-20 ದಿನಗಳ ನಂತರ ಬೆಳೆಗಳನ್ನು ಬೆಳೆಯಬಹುದು.. ಈ ಕಳೆನಾಶಕವನ್ನು ಕರಿಕೆಗೆ ಮಾತ್ರ ಸಿಂಪಡಿಸುವುದರಿಂದ ಭೂಮಿಯಲ್ಲಿ ಇದರ ಅಂಶವಿರಲಿಕ್ಕೆ ಅವಕಾಶವಿಲ್ಲ. ಗ್ಲೈಫೋಸೇಟ್ ಸಿಂಪರಣೆಯು ಯಾವದೇ ಬೆಳೆಗಳಿಗೆ ತಗುಲದಂತೆ ಎಚ್ಚರಿಕೆ ವಹಿಸಬೇಕು. ಆದರಂತೆ ಚೀಕು ನಿಯಂತ್ರಣಕ್ಕಾಗಿ ವಿಶೇಷವಾಗಿ ಧನುಕಾ ಕಂಪನಿಯಸೆಂಪ್ಯಾಕಳೆನಾಶಕವುಹೆಚ್ಚುಪರಿಣಾಮಕಾರಿಯಾಗಿದೆ.

ಬಳ್ಳಾರಿ ಜಾಲಿ



ಇದರ ನಿಯಂತ್ರಣಕ್ಕೆಪ್ರತಿ ಲೀಟರ್ ನೀರಿಗೆ 30 ಗ್ರಾಂ ಗ್ಲೈಫೋಸೇಟ್ (ಕೇ 71 ಹರಳು) 5 ಗ್ರಾಂ 2-4 ಡಿ ಸೋಡಿಯಂ ಲವಣ ಮತ್ತು 10 ಮಿ.ಲೀ ಪ್ಯಾಕಾಕ್ವಾಟ್ ಕಳೆನಾಶಕಗಳ ಮಿಶ್ರಣವನ್ನು ಸಿಂಪರಣೆ ಮಾಡುವುದರಿಂದ ಇದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು. ಬೇರು ಸಮೇತ ಆಗದು, ಕಾಂಡ ಸುಡುವುದು ಮತ್ತು ಕಡಿದ ಕಾಂಡದ ಭಾಗಕ್ಕೆ ಕಳೆನಾಶಕದಿಂದ ಲೇಪನಗೊಳಿಸುವುದು ಸೇರಿದಂತೆ ಇನ್ನಿತರ ಪೂರಕ ಕ್ರಮಗಳನ್ನು ಬಳಸುವುದರಿಂದ ಈ ಸಸ್ಯದ ನಿಯಂತ್ರಣ ಸಾಧ್ಯ.

ಭಾರತದಲ್ಲಿ ಕಬ್ಬು ಬೆಳೆಯ ಕ್ಷೇತ್ರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆದ್ದರಿಂದ ಈ ಕಬ್ಬಿನ ನಾಟಿ ಹಾಗೂ ಕುಳಿಯಲ್ಲಿ ಸಾಮಾನ್ಯವಾಗಿ ಎಲ್ಲ ರೀತಿಯ ಕಳೆ/ಕಸದ ನಿಯಂತ್ರಣವನ್ನು ಈ ಕೆಳಗಿನಂತೆ ನಿರ್ವಹಣೆ ಮಾಡಬೇಕು. ಆಟ್ರಾಸನ್ ಶೇಕಡಾ. 50 ರ 1 ಕೆ.ಜಿ + ಬೆಂಜಿ-700 0.3 ಕೆ.ಜಿ ಅಥವಾ ಡೈಯುರಾನ್ ಶೇಕಡಾ. 80 ರ ಪುಡಿ 1 ಕೆ.ಜಿ. ಅಥವಾ ಫೋಕಸ್ 2 ಕೆ.ಜಿ. ಅಥವಾ 1 ಲೀಟರ್ ನೀರಿನಲ್ಲಿ ಗ್ಲೈಫೋಸೇಟ್ 41 ಎಮ್.ಎಲ್. 10 ಮಿ.ಲೀ+ 20 ಗ್ರಾಮ್ ಯೂರಿಯಾ ಅಥವಾ ಅಮೋನಿಯಮ್ ಲವಣ+ ಸ್ವಲ್ಪ ನಿಂಬೆ ಹುಳಿ ರಸ ಈ ಮೇಲಿನ ಯಾವುದಾದರೂ ಒಂದು ಮಿಶ್ರಣವನ್ನು ನಾಟಿ ಮಾಡಿದ ನಂತರ 3 ದಿವಸಗಳಲ್ಲಿ 300 ಲೀಟರ್ ನೀರಿನಲ್ಲಿ ಸೇರಿಸಿ ಪ್ರತಿ ಎಕರೆಗೆ ಸಿಂಪರಣೆ ಮಾಡಬೇಕು.

ಮುಂಜಾಗ್ರತಾ ಕ್ರಮಗಳು

ಮೂಲ ಬೆಳೆಯನ್ನು ನಾಟಿ ಮಾಡಿದ ತಕ್ಷಣ ಕಳೆನಾಶಕಗಳನ್ನು ಸಿಂಪರಣೆ ಮಾಡಬೇಕು. ಹೆಚ್ಚಿಗೆ ಉಪಯೋಗಿಸಿದಲ್ಲಿ ಮುಖ್ಯ ಬೆಳೆಯ ಬೀಜದ ಮೊಳಕೆಗೆ ತೊಂದರೆಯಾಗುವುದಲ್ಲದೆ, ಬೆಳೆಯು ಕುಂಠಿತಗೊಳ್ಳುತ್ತದೆ. ಕಳೆಗಳು ದೊಡ್ಡದಾದ ನಂತರ ಕಳೆನಾಶಕಗಳನ್ನು ಸಿಂಪಡಿಸಬಾರದು. ಇದರಿಂದ ಹೆಚ್ಚಿನ ಆಸಾಧ್ಯ ಮತ್ತು ಮಣ್ಣಿನ ಫಲವತ್ತತೆಯೂ ಹಾಳಾಗುತ್ತದೆ.

ಶರೀರಕ್ಕೆ ಗಾಯವಾದವರು ಮತ್ತು ಚಿಕ್ಕ ಮಕ್ಕಳು ಸಿಂಪರಣೆ ಮಾಡಬಾರದು.ಸಿಂಪರಣೆಗೆ ಉತ್ತಮ ನಾಜಲ್ ಬಳಕೆ ಮಾಡಿ ಮತ್ತು ಕಡಿಮೆ ಸಾಂದ್ರತೆಯಲ್ಲಿ ಸಿಂಪಡಿಸುವ ಮೈಕ್ರಾನ್ ಸ್ಪ್ರೆಯರ್ ಉಪಯೋಗಿಸಬೇಕು. ರಾಸಾಯನಿಕ ಸಿಂಪರಣೆ ಮಾಡುವಾಗ ಮಣ್ಣು ತೇವಾಂಶದಿಂದ ಕೂಡಿರಬೇಕು. ಸಿಂಪರಣೆ ನಂತರ ಕನಿಷ್ಠ ನಾಲ್ಕರಿಂದ ಆರು ಗಂಟೆಗಳ ಕಾಲ ಮಳೆಯಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಮಾಡಬೇಕು. ಕೆಲವೊಂದು ಕಳೆನಾಶಕಗಳ ಸಿಂಪರಣಾ ದ್ರಾವಣವು ಸಾಧ್ಯವಾದಷ್ಟು ನೆಲಕ್ಕೆ ಬೀಳದಂತೆ ಎಚ್ಚರಿಕೆಯಿಂದ ಮಾಡಬೇಕು.

ದ್ರಾವಣದಲ್ಲಿನ್ನಲ್ಲ ಯೂರಿಯಾ ಅಥವಾ ನಿಂಬೆರಸ ಅಥವಾ ಉಪ್ಪು ಅಥವಾ ಸಕ್ಕರೆಯನ್ನು ಮಿಶ್ರಣ ಮಾಡಿದಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಗಾಳಿಯ ವಿರುದ್ಧವಾಗಿ ಸಿಂಪರಣೆ ಮಾಡಬಾರದು. ಸಿಂಪರಣೆ ಮಾಡುವವರು ಗಾಳಿಯ ವಿರುದ್ಧ ದಿಕ್ಕಿನಲ್ಲಿ ಹಿಮ್ಮುಖವಾಗಿ ಸಿಂಪರಣೆ ಮಾಡುತ್ತ ಸಿಂಪರಣೆ ಮಾಡಲಾರದ ಸ್ಥಳದಲ್ಲಿ ಚಲಿಸುತ್ತಿರಬೇಕು. ಸಿಂಪರಣೆ ನಂತರ ಕನಿಷ್ಠ 48 ಗಂಟೆಗಳ ಕಾಲ ಸಾಕು ಪ್ರಾಣಿಗಳು ಸಿಂಪರಣೆ ಮಾಡಿದ ಸ್ಥಳಗಳಿಗೆ ಹೋಗದಂತೆ ಎಚ್ಚರವಹಿಸಬೇಕು. ಮುಂಜಾನೆ ಮತ್ತು ಸಾಯಂಕಾಲ ಸಿಂಪರಣೆಯನ್ನು ಕೈಗೊಳ್ಳುವದು ಹೆಚ್ಚು ಸೂಕ್ತ. ಬಿಸಿಲು ಹೆಚ್ಚಾಗಿರುವ ಸಮಯದಲ್ಲಿ ಸಿಂಪರಣೆ ಮಾಡಬಾರದು.

■ ಬಸವರಾಜ ಶಿವಪ್ಪ ಗಿರಗಾಂವಿ
ಜಮಖಂಡಿ

20 ಗುಂಟೆಯಲ್ಲಿ 56 ಟನ್ ಕಬ್ಬು ಉತ್ಪಾದನೆ

■ ಸುಧೀರ ಕುಂಭೋಜಕರ

ಈ ರೈತನ ಸಾಧನೆ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತೆ ಇದೆ. 20 ಗುಂಟೆ ಜಮೀನಿನಲ್ಲಿ 56 ಟನ್ ಕಬ್ಬು ಬೆಳೆದು ದಾಖಲೆ ನಿರ್ಮಿಸಿದ ಯಶೋಗಾಥೆಯಿದು. ಅದರಲ್ಲಿಯೂ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಸಮೀಪದ ಮಾಂಜರಿ ಗ್ರಾಮದ ರೈತ ಕುಮಾರ ಮಗೆಣ್ಣವರ ಅವರು ಈ ಯಶೋಗಾಥೆಯ ನಾಯಕ.

ಕುಮಾರ ಮಗೆಣ್ಣವರ ಇಸ್ರೇಲ್ ಪದ್ಧತಿಯಂತೆ 20 ಗುಂಟೆಯಲ್ಲಿ 65 ಟನ್ ಕಬ್ಬು ಬೆಳೆದು ದಾಖಲೆ ಮಾಡಿದ್ದಾರೆ. 20 ಗುಂಟೆ ಪ್ಲಾಟ್ ನಿರ್ಮಿಸಿ 4★4 ಆಡಿ ಅಂತರದಲ್ಲಿ 2★2 ಆಡಿ ಗುಂಡಿಗಳನ್ನು ತೆಗೆದು ಅದರಲ್ಲಿ ಫಲವತ್ತಾದ ಮಣ್ಣು, ಸಗಣಿ ಗೊಬ್ಬರ ಹಾಕಿ ಅದರಲ್ಲಿ 1110 ಜಾತಿಯ ಕಬ್ಬಿನ 25 ಗಣಿಕೆಗಳನ್ನು ನಾಟಿ ಮಾಡಿ ನೀರು ಹಾಯಿಸಿದ್ದಾರೆ.

ಸಮಯಕ್ಕೆ ಅನುಗುಣವಾಗಿ ಮಾಂಜರಿಯ ಲಕ್ಷ್ಮೀ ಆಗ್ರೋಟೆಕ್‌ನ ಚೇತನ ತೇಲಿಯವರ ಮಾರ್ಗದರ್ಶನದಂತೆ ರಸಗೊಬ್ಬರ ನೀರು ನೀಡಿದ್ದಾರೆ. 2 ಸಾಲುಗಳ ಮಧ್ಯೆ ಚೆಂಡು ಹೂ ಬೆಳೆ ನಾಟಿ ಮಾಡಿ ಆ ಮೂಲಕ 60 ಸಾವಿರಕ್ಕಿಂತ ಹೆಚ್ಚಿಗೆ



ಆದಾಯವನ್ನು ಪಡೆದುಕೊಂಡಿದ್ದಾರೆ. ಕಬ್ಬು ನಾಟಿ ಮಾಡಿ 13 ತಿಂಗಳುಗಳನಂತರಕಟಾವುಮಾಡಿದಾಗ20 ಗುಂಟೆಯಲ್ಲಿ 56 ಟನ್ ಕಬ್ಬು ಬೆಳೆದು ದಾಖಲೆ ನಿರ್ಮಿಸಿದ್ದಾರೆ. ಇವರ ಆಧುನಿಕ ಕೃಷಿ ಪದ್ಧತಿಯನ್ನು ವಿಕ್ಷಿಸಲು ಸುತ್ತಮುತ್ತಲಿನ ಗ್ರಾಮಗಳ ಕಬ್ಬು ಬೆಳೆಗಾರರು ಆಗಮಿಸಿ ಕುಮಾರ ಮಗೆಣ್ಣವರ ಅವರಿಂದ ಮಾರ್ಗದರ್ಶನ ಪಡೆದುಕೊಂಡು ತಾವು ಕೂಡ ಈ ಪದ್ಧತಿಯನ್ನು ಅನುಸರಿಸಲು ಮುಂದಾಗುತ್ತಿದ್ದಾರೆ.

ಕಡಿಮೆ ಜಮೀನಿನಲ್ಲಿ ಅಧಿಕ ಇಳುವರಿ ಪಡೆದುಕೊಂಡು ಹೆಚ್ಚಿನ ಲಾಭಕ್ಕೆ ಈ ಭಾಗದ ರೈತರು ಕುಮಾರ ಮಗೆಣ್ಣವರ ಅವರ ಮಾರ್ಗದರ್ಶನ ಪಡೆದುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಹಳೆಯ ಪದ್ಧತಿಯನ್ನು ಮರೆತು ಆಧುನಿಕ ಕೃಷಿ ಪದ್ಧತಿಗೆ ಈ ಭಾಗದ ರೈತರು ಮುಂದಾಗುತ್ತಿರುವುದು ಮಾತ್ರ ಸತ್ಯ!

01-12-2021 Sk Pg 09

For more information visit
University Library Website
Web - uasbagrilibindia.org
E-mail- librarian@uasbangalore.edu.in

01-12-2021 Sk Pg 09

"Wrong thinking is the only problem in life"

ನುಗ್ಗೆ ಸೊಪ್ಪಿಂದ ಎಕರೆಗೆ ₹15 ಲಕ್ಷ ಗಳಿಕೆ!

ನುಗ್ಗೆ ಕಾಯಿ ಮತ್ತು ಸೊಪ್ಪಿನಲ್ಲಿ ಸಂಬಾರ್ ಮಾಡಬಹುದು, ಅದಕ್ಕಿಂತ ಹೆಚ್ಚಿಗೆ ಏನು ಸಾಧ್ಯ ಎಂದು ಬಹುತೇಕರು ಅಂದುಕೊಂಡಿರುತ್ತಾರೆ. ಆದರೆ, ಕೊಪ್ಪಳದ ರೈತರೊಬ್ಬರು ನುಗ್ಗೆ ಸೊಪ್ಪು ಬೆಳೆದು ಎಕರೆಗೆ ಸುಮಾರು 15 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಆಶ್ಚರ್ಯ ಅನಿಸಿದ್ರೂ ಇದು ಸತ್ಯ! ನುಗ್ಗೆ ಸೊಪ್ಪು ಪೌಷ್ಟಿಕತೆಯ ಕಣಜವಾಗಿದ್ದು, ಆಪೌಷ್ಟಿಕತೆಗೆ ರಾಮಬಾಣವಾಗಿದೆ. ಮುಂದುವರಿದ ದೇಶಗಳಲ್ಲಿ ನುಗ್ಗೆ ಸೊಪ್ಪಿನ ಪುಡಿಗೆ ಭಾರಿ ಬೇಡಿಕೆ ಬಂದಿದೆ. ನಮ್ಮಲ್ಲಿ ಹೇಗೆ ಅರಿಶಿನಪುಡಿ, ಖಾರದಪುಡಿ ಬಳಸುತ್ತೇವೋ ಹಾಗೆಯೇ ಅಲ್ಲಿ ನುಗ್ಗೆ ಪುಡಿ ಬಳಕೆಯಾಗುತ್ತಿದೆ. ಇದನ್ನು ಮನಗಂಡು ಕೊಪ್ಪಳದ ರೈತ ಬಸಯ್ಯ ಹಿರೇಮಠ ನುಗ್ಗೆ ಸೊಪ್ಪು ಬೆಳೆದು ಅದರಿಂದ ಉತ್ಪನ್ನಗಳನ್ನು ತಯಾರಿಸಿ ದೇಶ-ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ನುಗ್ಗೆ ಸೊಪ್ಪಿನ ಪೌಡರ್ ಜತೆಗೆ ನುಗ್ಗೆ ಟೀ ಬ್ಯಾಗ್, ಎಣ್ಣೆ, ಕ್ಯಾಪ್ಸೂಲ್, ಟ್ಯಾಬ್ಲೆಟ್‌ಗಳನ್ನು ತಯಾರಿಸಿ ಮಾರುಕಟ್ಟೆ ಕಂಡುಕೊಂಡಿದ್ದಾರೆ.

85 ಎಕರೆಯಲ್ಲಿ ನುಗ್ಗೆ ಸೊಪ್ಪು ಬೆಳೆ: ಕೃಷಿ ಮಾಡಿ ನಮಗಿಷ್ಟದ ಬೆಳೆ ಬೆಳೆದು ಮಾರುಕಟ್ಟೆ ಹುಡುಕುವುದಕ್ಕಿಂತ ಮಾರುಕಟ್ಟೆಯಲ್ಲಿ ಯಾವ ಬೆಳೆಗೆ ಬೇಡಿಕೆ ಇದೆ ಎನ್ನುವುದರ ಹುಡುಕಾಟವನ್ನು ಬಸಯ್ಯ ಹಿರೇಮಠ ನಡೆಸುತ್ತಾರೆ. ಆಗ ಅವರಿಗೆ ಸಿಕ್ಕಿದ್ದೇ ನುಗ್ಗೆ ಸೊಪ್ಪಿನ ಬೆಳೆ. ಬಿಸಿಲು ಜಾಸ್ತಿ ಇರುವ, ಹೆಚ್ಚು ನೀರಿನ ವ್ಯವಸ್ಥೆಯಿಲ್ಲದ ಕೊಪ್ಪಳದ ಭೂಮಿಯಲ್ಲಿ ಉತ್ತಮ ರೀತಿಯಲ್ಲಿ ನುಗ್ಗೆ ಸೊಪ್ಪು ಬೆಳೆಯಬಹುದು ಎಂದು ಅವರು ತೀರ್ಮಾನಿಸಿ, 85 ಎಕರೆಯಲ್ಲಿ ಕೃಷಿ ಆರಂಭಿಸುತ್ತಾರೆ. ಕಡಿಮೆ ರೋಗ ಮತ್ತು ಕಡಿಮೆ ಖರ್ಚಿನಲ್ಲಿ ಬೆಳೆಯಬಹುದಾದ ನುಗ್ಗೆ ಸೊಪ್ಪು ಈಗ ಬಸಯ್ಯ ಅವರ ಬದುಕನ್ನು ಹಸನಾಗಿಸಿದೆ.



ಕಡಿಮೆ ಖರ್ಚಲ್ಲಿ ಬೆಳೆಯುವ ಪದ್ಧತಿ: 1 ಎಕರೆಯಲ್ಲಿ ನುಗ್ಗೆ ಸೊಪ್ಪು ಕೃಷಿ ಮಾಡಬೇಕು ಅಂದರೆ ಸಸಿಗೆ 50 ರಿಂದ 60 ಸಾವಿರ ರೂ. ಖರ್ಚು ಬರುತ್ತೆ. ಇದನ್ನು ತಪ್ಪಿಸಲು ಬಸಯ್ಯ, ನುಗ್ಗೆ ಬೀಜಗಳನ್ನು ನಾಟಿ ಮಾಡಿ ಗಿಡ ಮಾಡುವ ಪದ್ಧತಿ ಕಂಡುಕೊಂಡರು. ರೋಗ ನಿರೋಧಕ ಶಕ್ತಿ ಹೆಚ್ಚಿಗೆ ಇರುವ ಪಿಕೆಎಂ 1 ತಳಿಯ ಬೀಜಗಳನ್ನು ಆಯ್ಕೆ ಮಾಡಿಕೊಂಡು ನಾಟಿ ಮಾಡಿದರು. ಇದರಿಂದ ಎಕರೆಗೆ ಬರೀ 2 ಸಾವಿರ ರೂ. ಖರ್ಚು ಬಂತು. ನುಗ್ಗೆ ಬೀಜ ನಾಟಿ ಮಾಡಿದ ಒಂದು ವಾರದಲ್ಲಿ ಮೊಳಕೆಯೊಡೆದು 90 ದಿನಗಳಲ್ಲಿ ದೊಡ್ಡ ಗಿಡವಾಗುತ್ತದೆ. ಪ್ರತಿ 60 ದಿನಗಳಿಗೊಮ್ಮೆ ಪ್ರತಿ ಗಿಡಕ್ಕೆ 5 ಕೆಜಿ ಸೊಪ್ಪು ಸಿಗುತ್ತದೆ ಎನ್ನುತ್ತಾರೆ ಬಸಯ್ಯ ಹಿರೇಮಠ್.

ನುಗ್ಗೆ ಪುಡಿ, ಟ್ಯಾಬ್ಲೆಟ್, ಕ್ಯಾಪ್ಸೂಲ್, ಟೀ ಬ್ಯಾಗ್: ಕೊಯ್ದ ನುಗ್ಗೆ ಸೊಪ್ಪನ್ನು ಶುದ್ಧ ನೀರಿನಲ್ಲಿ ತೊಳೆದು ನಂತರ ಅದನ್ನು ಸೋಲಾರ್ ಡ್ರೈಯರ್‌ನಲ್ಲಿ ಒಣಗಿಸಬೇಕು. ಒಣಗಿಸಿದ ನಂತರ ಆಂಟಿ ಬ್ಯಾಕ್ಟೀರಿಯಲ್ ಶೆಡ್‌ನ ಒಳಗೆ ಯಂತ್ರಗಳನ್ನು ಬಳಸಿ ಪುಡಿ ಮಾಡಬಹುದು. ಯಾವುದೇ ಕಾರಣಕ್ಕೂ ಸೂರ್ಯನ ಬಿಸಿಲಿನಲ್ಲಿ ಒಣಗಿಸಬಾರದು, ಸೂರ್ಯನ ಬಿಸಿಲಿನಲ್ಲಿ ಒಣಗಿಸಿದರೆ ಪೌಷ್ಟಿಕಾಂಶಗಳು ನಾಶವಾಗುವ ಸಾಧ್ಯತೆ ಇರುತ್ತದೆ. ನುಗ್ಗೆ ಪುಡಿಯಿಂದ ನುಗ್ಗೆ ಸೊಪ್ಪಿನ ಪೌಡರ್, ನುಗ್ಗೆ ಟೀ ಬ್ಯಾಗ್, ಎಣ್ಣೆ, ಕ್ಯಾಪ್ಸೂಲ್ , ಟ್ಯಾಬ್ಲೆಟ್‌ಗಳನ್ನು ತಯಾರಿಸಬಹುದು ಎನ್ನುತ್ತಾರೆ ಬಸಯ್ಯ ಹಿರೇಮಠ.

ಪ್ರತಿ 100 ಗ್ರಾಂ ನುಗ್ಗೆ ಪೌಡರ್‌ಗೆ 475 ರೂ.: ಮೊರಿಂಗಾ ಸೂಪರ್ ಫುಡ್ಸ್ ಎನ್ನುವ ಬ್ರ್ಯಾಂಡ್ ಹುಟ್ಟು ಹಾಕಿರುವ ಕೊಪ್ಪಳದ ರೈತ ಬಸಯ್ಯ ಹಿರೇಮಠ, ಪ್ರತಿ 100 ಗ್ರಾಂ ನುಗ್ಗೆಪುಡಿಯನ್ನು 475 ರೂ.ಗೆ ಮಾರಾಟ ಮಾಡುತ್ತಿದ್ದಾರೆ. ದೇಶ-ವಿದೇಶದ ವಿವಿಧ ಆರ್ಗ್ಯಾನಿಕ್ ಅಂಗಡಿಗಳಿಗೆ ಇವರ ನುಗ್ಗೆ ಕ್ಯಾಪ್ಸೂಲ್, ಆಯಿಲ್, ಪೌಡರ್, ಟ್ಯಾಬ್ಲೆಟ್, ಟೀ ಬ್ಯಾಗ್ ರಫ್ತಾಗುತ್ತಿವೆ.



ಮನಿ ಮಾತು



ಆಪ್ತ ಸಲಹೆ

ಎಸ್. ಸುಧೀರ್

ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com

ಕೋರ್ಸ್‌ನಲ್ಲಿ ಏನಿದೆ?

- ಕೋರ್ಸ್ ಪರಿಚಯ
- ಮಾರ್ಗದರ್ಶಕರ ಪರಿಚಯ
- ನುಗ್ಗೆಸೊಪ್ಪಿನ ಮಹತ್ವ, ಬೇಡಿಕೆ, ಮಾರುಕಟ್ಟೆ
- ನುಗ್ಗೆ ಕೃಷಿ - ಪೂರ್ಣ ಮಾಹಿತಿ
- ಜೀವಾಮೃತ ಮತ್ತು ಗೋಕೃಪಾಮೃತದ ಮಹತ್ವ
- ನುಗ್ಗೆ ಕೃಷಿ-ಅಂತರ್ ಬೆಳೆ, ನೀರಾವರಿ ಯೋಜನೆ ಮತ್ತು ನೈಸರ್ಗಿಕ ಬೇಲಿ ನಿರ್ಮಾಣ
- ನುಗ್ಗೆ ಸೊಪ್ಪು ಕಟಾವು ಮಾಡುವ ವಿಧಾನ
- ಕಟಾವಿನ ನಂತರದ ವಿಧಾನ
- ನುಗ್ಗೆ ಸೊಪ್ಪು ಒಣಗಿಸುವ ವಿಧಾನ
- ಸಂಸ್ಕರಣೆ ಮತ್ತು ಮೌಲ್ಯವರ್ಧನೆ (Value addition)
- ಇತರ ಉತ್ಪನ್ನಗಳು, ಪ್ಯಾಕಿಂಗ್
- ಮಾರ್ಕೆಟಿಂಗ್ ಮತ್ತು ವಿತರಣೆ
- ಕೋರ್ಸ್‌ನ ತಿರುಳು

ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ನುಗ್ಗೆ ಸೊಪ್ಪಿನ ಕೃಷಿ, ಉತ್ಪನ್ನಗಳ ಬಗ್ಗೆ

ಬಸಯ್ಯ ಹಿರೇಮಠ್ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ನುಗ್ಗೆ ಸೊಪ್ಪಿನ ಕೃಷಿ ಮತ್ತು ಉತ್ಪನ್ನಗಳ ಬಗ್ಗೆ ಸಮಗ್ರ ಮಾಹಿತಿ ಇರುವ ಕೋರ್ಸ್ ರೂಪಿಸಿಕೊಟ್ಟಿದ್ದಾರೆ. ಒಂದು ಇಡೀ ದಿನ ಇಂಡಿಯನ್ ಮನಿ ಡಾಟ್ ಕಾಂನ ಸಿಇಒ ಸಿ. ಎಸ್.ಸುಧೀರ್ ಅವರು ಬಸಯ್ಯ ಹಿರೇಮಠ್ ಸಂದರ್ಶನ ಮಾಡಿ ನುಗ್ಗೆ ಸೊಪ್ಪಿನ ಕೃಷಿ ಮತ್ತು ಮೌಲ್ಯವರ್ಧನೆ ಬಗ್ಗೆ ನಿಮಗಿರಬಹುದಾದ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಿದ್ದಾರೆ. ನುಗ್ಗೆ ಸೊಪ್ಪು ಬೆಳೆಸೋದು ಹೇಗೆ, ಅದಕ್ಕೆ ಯಾವ ರೀತಿ ಗೊಬ್ಬರ ಮತ್ತು ನೀರಿನ ಆರೈಕೆ ಮಾಡಬೇಕು, ಬಿತ್ತನೆ ಬೀಜ ಎಲ್ಲಿಂದ ತರಬೇಕು, ಸಾಮಾನ್ಯವಾಗಿ ಬರುವ ರೋಗಗಳನ್ನು ನಿಯಂತ್ರಿಸೋದು ಹೇಗೆ, ಹೇಗೆ ಸೊಪ್ಪು ಕಟಾವು ಮಾಡಬೇಕು, ಕಟಾವು ಮಾಡಿದ ನಂತರ ಹೇಗೆ ಒಣಗಿಸಬೇಕು, ಡ್ರೈಯರ್ ಯಂತ್ರ ಎಲ್ಲಿಂದ ತರಬೇಕು, ಪೌಡರ್ ಮಾಡುವ ಘಟಕ ನಿರ್ಮಾಣ ಹೇಗೆ... ಹೀಗೆ ಎಲ್ಲ ರೀತಿಯ ಮಾಹಿತಿ ಕೋರ್ಸ್‌ನಲ್ಲಿದೆ. ಹಾಗಾದ್ರೆ ಇನ್ನೇಕೆ ತಡ ಈಗಲೇ ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ, ಕೃಷಿ ಆವಿಷ್ಕಾರಗಳ ಬಗ್ಗೆ ಕಲಿತು ನಿಮ್ಮ ಆದಾಯ ಹೆಚ್ಚಿಸಿಕೊಳ್ಳಿ.

ವಿಜಯವಾಣಿ ಓದುಗರಿಗೆ 2,000 ರೂ. ಸ್ಕಾಲರ್‌ಶಿಪ್

ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ಡೌನ್‌ಲೋಡ್ ಮಾಡಿ. VIJAYAVANI ಎಂದು ರೆಫರಲ್ ಕೋಡ್ ಬಳಸಿ, 2,000 ರೂ. ಸ್ಕಾಲರ್‌ಶಿಪ್ ಪಡೆಯಿರಿ.

Rain relief: Govt may ask Rs 1,100 cr from Centre

Report to be submitted to Centre soon, says Revenue Minister Ashoka

BENGALURU, DHNS

The state government is likely to seek Rs 1,100 crore as relief from the Centre for the damages incurred during the recent spate of heavy rainfall, Revenue Minister R Ashoka said Tuesday.

"The report we have to submit to the Centre is getting ready. We may ask for Rs 1,100 crore as relief," Ashoka told reporters, adding that the memorandum seeking compensation under the National Disaster Response Fund (NDRF) will be submitted in three-four days.

Karnataka received 142 mm rainfall in November, against the 39 mm it receives on an average—nearly 263% deviation from the norm. The deluge led to the death of 26 people, crop losses on 5.81 lakh hectares of land, damage to 2,339 km of road and so on, according to preliminary data. Officials say these figures have been updated and are being compiled.

According to Ashoka, the government has released Rs 318.87 crore to 4.61 lakh farmers as compensation for crop losses so far.

"We have introduced a new system to pay input subsidies to farmers," Ashoka said.

"Earlier, it used to be paid once a month or once in three months. We're now making immediate payments in instalments that are released once every three or four days," he explained.

All deputy commissioners have been asked to release timely payments to people affected by floods and rain, Ashoka said.

"Deputy commissioners have Rs 681 crore in their personal deposit accounts," he said.



According to the government's preliminary data, the rain has caused the death of 26 people, crop losses on 5.81 lakh hectares of land and damage to 2,339 km of roads in the state. DH PHOTO

01-12-2021 Dec Hrd Pg 03

ಕೃಷಿ ಆರ್ಥಿಕತೆಯನ್ನು ಬಲಪಡಿಸಲು ನಾವೇನು ಮಾಡಬಹುದು...

ಕೃಷಿ ಕಾಯಿದೆ ರದ್ದು, ಮುಂದೇನು?



ಲೋಕಸಭೆ ಮತ್ತು ರಾಜ್ಯಸಭೆಗಳೆರಡೂ ಇತ್ತೀಚೆಗೆ, ಮೂರು ಕೃಷಿ ಕಾನೂನುಗಳನ್ನು ರದ್ದುಗೊಳಿಸುವ ವಿಧೇಯಕವನ್ನು ಅಂಗೀಕಾರ ಮಾಡಿದವು. ಹೀಗಾದ್ದರಿಂದ, ನಾವು ಇಲ್ಲಿಂದ ಮುಂದೆ ಎಲ್ಲಿಗೆ ಹೋಗುತ್ತೇವೆ ಹೇಗೆ ಪ್ರಯಾಣಿಸುತ್ತೇವೆ ಎಂಬುದು ಈಗ ಒಂದು ಪ್ರಶ್ನೆಯಾಗಿ ನಿಂತಿದೆ.

ಖಚಿತವಾಗಿ ಹೇಳುವುದಾದರೆ, ಇಡೀ ದೇಶದ ತೆರಿಗೆದಾರರಿಂದ ಬೆಂಬಲಿತವಾದ ಕನಿಷ್ಠ ಬೆಂಬಲ ಬೆಲೆಯಲ್ಲಿ (ಎಂಎಸ್‌ಪಿ) ಅಕ್ಕಿ ಮತ್ತು ಗೋಧಿಯನ್ನು ಖರೀದಿಸುವುದು ಹಾಗೂ ಸಂಗ್ರಹಿಸುವುದು, ಪಂಜಾಬ್ ಮತ್ತು ಹರಿಯಾಣದ ರೈತರಿಗೆ ನಿರಂತರವಾದ ಆದಾಯದ ಭರವಸೆಯನ್ನಂತೂ ನೀಡುತ್ತದೆ. ಆದರೆ ಬಿಹಾರ ಮತ್ತು ಒಡಿಶಾದಂತಹ ಬಡ ರಾಜ್ಯಗಳ ರೈತರ ಬಗ್ಗೆ ಏನು ಹೇಳಬಹುದು? ಕನಿಷ್ಠ ಬೆಂಬಲ ಬೆಲೆಯ ಯಾವುದಾದರೂ ಗಮನಾರ್ಹವಾದ ಕಾರ್ಯಕ್ರಮವು ಇಲ್ಲಿ ಅಸ್ತಿತ್ವದಲ್ಲಿದೆಯೇ? ಇದೆಯೆಂದು ಅನಿಸುತ್ತಿಲ್ಲ.

ಕೃಷಿ ಬೆಳವಣಿಗೆಗೆ ಮಿತಿಗಳು: ಕೃಷಿಯಲ್ಲಿ ರೈತರ ಆದಾಯವನ್ನು ಹೆಚ್ಚಿಸುವ ಏಕೈಕ ಮಾರ್ಗವೆಂದರೆ ಕೃಷಿಯ ಬೆಳವಣಿಗೆಯಲ್ಲಿ ವೇಗವರ್ಧನೆ. ಆದರೆ ಭಾರತೀಯ ಕೃಷಿಯ ಬೆಳವಣಿಗೆ ಇಲ್ಲಿಯವರೆಗೆ ಯಾವುದೇ ಹತ್ತು ವರ್ಷಗಳ ಅವಧಿಯಲ್ಲಿ ಶೇಕಡ 4.4ರಷ್ಟು ಮಾತ್ರ ಇದೆ. 1980-81ರಿಂದ 1989-90ರ ದಶಕದಲ್ಲಿ ಹಸಿರು ಕ್ರಾಂತಿಯು ಆದರ ಉತ್ತುಂಗದಲ್ಲಿತ್ತು. ಇಂದು, ಅಂತಹ ಬೆಳವಣಿಗೆಯನ್ನು ಸಾಧಿಸಿದರೆ ಅದು ಆಸಾಧಾರಣ ಸವಾಲನ್ನು ಒಡ್ಡುತ್ತದೆ ಮಾತ್ರವಲ್ಲ, ಪ್ರಶ್ನೆಯನ್ನು ಕೇಳುತ್ತದೆ- ಆಷ್ಟೊಂದು ಉತ್ಪಾದನೆಯನ್ನು ಎಲ್ಲಿ ಮಾರಾಟ ಮಾಡಲಾಗುತ್ತದೆ? ಭಾರತದ ಆಗತ್ಯಗಳನ್ನು ಪೂರೈಸಲು ಈಗಾಗಲೇ ಸಾಕಷ್ಟು ಆಹಾರ ಧಾನ್ಯಗಳನ್ನು



ಉತ್ಪಾದಿಸಲಾಗುತ್ತಿದೆ. ಆಂತರಿಕವಾಗಿಯೇ ಅವುಗಳ ಮಾರಾಟದಲ್ಲಿ ಯಾವುದೇ ಗಮನಾರ್ಹ ವಿಸ್ತರಣೆಯನ್ನು ಮಾಡಿದರೂ ಅದು ರೈತರ ಆದಾಯವನ್ನು ಹೆಚ್ಚಿಸುವ ಬದಲು ಬೆಲೆಗಳನ್ನು ಕುಗ್ಗಿಸುತ್ತದೆ. ರಫ್ತು ಮಾರುಕಟ್ಟೆಗಳನ್ನು ಹುಡುಕುವುದು ಆಮದು ಮಾಡುವ ದೇಶಗಳೊಂದಿಗೆ ಇನ್ನೊಂದು ಬಗೆಯ ಮುಖಾಮುಖಿಗೆ ಕಾರಣವಾಗುತ್ತದೆ. ಅಂದರೆ ಈ ದೇಶಗಳು ನಮ್ಮ ದೇಶದಲ್ಲಿ ಬೆಳೆಗಳಿಗೆ ನೀಡಲಾಗುವ ಸಬ್ಸಿಡಿಗಳಿಂದ ಸೃಷ್ಟಿಯಾಗುವ ಕಡಿಮೆ ಉತ್ಪಾದಕ ವೆಚ್ಚವನ್ನು ಎದುರಿಸಲು ಪ್ರತಿಬಂಧಕ ತೆರಿಗೆಗಳನ್ನು ಸುಂಕಗಳನ್ನು ಹಾಕಬಹುದು.

ಆಹಾರ ಬೆಳೆಗಳಲ್ಲಿ ವೈವಿಧ್ಯತೆಯನ್ನು ಸಾಧಿಸುವುದು ಇನ್ನೊಂದು ಬಗೆಯ ಆಯ್ಕೆ. ಆದರೆ ಕೃಷಿ ಕಾನೂನುಗಳ ರದ್ದತಿಯು ಇಲ್ಲೂ ಕೆಲವು ಬಗೆಯ ಅಡತಡೆಗಳನ್ನು ಸೃಷ್ಟಿಸಿದೆ. ಹೀಗೆ ವೈವಿಧ್ಯಮಯ ಬೆಳೆ ಬೆಳೆದವರಿಗೆ ಅವುಗಳಿಗೆ ಮಾರುಕಟ್ಟೆ ಕಂಡುಕೊಳ್ಳುವುದು ಕಷ್ಟ. ಯಾಕೆ ಎಂದು ನೋಡೋಣ. ಕೃಷಿ ಕಾಯಿದೆಗಳ ರದ್ದತಿಯಿಂದಾಗಿ ಅಂತಹವರು ಈಗ ತಮ್ಮ ಉತ್ಪನ್ನಗಳನ್ನು ದೊಡ್ಡ ರಫ್ತುದಾರರು, ಸಂಸ್ಕರಣಾ ಘಟಕಗಳು ಮತ್ತು ನಿಗಮಗಳಿಗೆ ನೇರವಾಗಿ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ಅಥವಾ ಅಂಥವರೊಂದಿಗೆ ಒಪ್ಪಂದದ ಕೃಷಿಯಲ್ಲಿ ತೊಡಗುವುದು ಸಾಧ್ಯವಿಲ್ಲ.

ನಮ್ಮ ಇತಿಹಾಸವು ಒಂದು ಅಂಶವನ್ನು ಸಮರ್ಥಿಸಿದೆ- ಅದೇನೆಂದರೆ, 1980-81ರಿಂದ 2014-15ರವರೆಗಿನ ಮೂರು ಮತ್ತು ಅರ್ಧ ದಶಕಗಳ ಅವಧಿಯಲ್ಲಿ ಆಂತರಿಕ ಆಹಾರ ಬೆಳೆಗಳ ಉತ್ಪಾದನೆ ನಡೆಸುವ ಸಾಗುವಳಿ ಪ್ರದೇಶಗಳ ಪ್ರಮಾಣ ಮೊದಲಿದ್ದ 73.9%ದಿಂದ 62.3%ಕ್ಕೆ ಇಳಿದಿದೆ.

ಬೇಸಾಯದ ಆಚೆಗೆ ನೋಡಿ: ನಾವು ತಪ್ಪಿಸಿಕೊಳ್ಳಲಾಗದ ವಿಚಾರ ಏನೆಂದರೆ, ರೈತರ ಆದಾಯವನ್ನು ಹೆಚ್ಚಿಸುವ ಸಾಧನಗಳು ಕೇವಲ ಕೃಷಿಯಲ್ಲಿ ಇಲ್ಲ. ಅದು ಉದ್ಯಮ ಮತ್ತು ಸೇವೆಗಳಲ್ಲಿ ಇದೆ. ಇವು ಮುಖ್ಯವಾಗಿ ಎರಡು: ಕೃಷಿ ವಲಯದಲ್ಲಿ ಮುಂದುವರಿಯಲು ಬಯಸುವವರಿಗೆ ಲಾಭದಾಯಕ ಉದ್ಯೋಗ ಸೃಷ್ಟಿ ಗಣನೀಯ ಪ್ರಮಾಣದಲ್ಲಿ ಬೇರೆ ಕಡೆಗೆ ಅವಕಾಶಗಳು ಮತ್ತು ಪ್ರಸ್ತುತ ಕೃಷಿಯನ್ನು ಅವಲಂಬಿಸಿರುವ ಜನಸಂಖ್ಯೆಗೆ ಹೆಚ್ಚಿನ ಆದಾಯ ಸಾಧ್ಯತೆಗಳ ಸೃಷ್ಟಿ.

ಮೊದಲನೆಯದು ನೇರವಾಗಿ ಫಲಿತಾಂಶವನ್ನು ನೀಡುತ್ತದೆ. ಹೊರಗಿನ ಉದ್ಯೋಗಗಳಿಗೆ ವಲಸೆ ಹೋಗುವವರು ಕೃಷಿ ವಲಯದಲ್ಲಿ ಇರುವವರಿಗೆ ಪರೋಕ್ಷವಾಗಿ ಜಮೀನು ಲಭ್ಯತೆಯನ್ನು ಹೆಚ್ಚಿಸುತ್ತಾರೆ. ಆ ಮೂಲಕ ಪ್ರತಿ ಕೆಲಸಗಾರನಿಗೆ ಭೂಮಿ ದೊರೆಯುತ್ತದೆ. ವಲಸೆಯು ಒಟ್ಟಾರೆ ಜಿಡಿಪಿ ಬೆಳವಣಿಗೆಯನ್ನು ವೇಗಗೊಳಿಸಲು ಸಹಾಯ ಮಾಡುತ್ತದೆ. ಆರ್ಥಿಕತೆಯ ವೇಗವರ್ಧಿತ ಬೆಳವಣಿಗೆಗೆ ಹಾಗೂ ಕೃಷಿಕರಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಯ ಸಂಪನ್ಮೂಲ ಲಭ್ಯತೆಗೆ ಇದು ಆವಶ್ಯಕವಾಗಿದೆ.

ಒಳ್ಳೆಯ ಸುದ್ದಿಗಳು: ಇಲ್ಲಿ ಒಳ್ಳೆಯ ಸುದ್ದಿ ಎಂದರೆ ಸರಕಾರವು ಈಗಾಗಲೇ ರಾಜಕೀಯವಾಗಿ ಕಷ್ಟಕರವಾಗಿದ್ದ, ಮತ್ತು ಪರಸ್ಪರ ಬಲಪಡಿಸುವ ನಾಲ್ಕು ಸುಧಾರಣೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ: ಸುಸ್ಥಿ ಮತ್ತು ದಿವಾಳಿ ಕಾಯಿದೆ, ಸರಕು ಮತ್ತು ಸೇವಾ ತೆರಿಗೆ, ಕಾರ್ಮಿಕ ಕಾಯಿದೆಗಳು ಮತ್ತು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರುವ ಕಾರ್ಪೊರೇಟ್ ಲಾಭ ತೆರಿಗೆ.

ಈ ಸುಧಾರಣೆಗಳು ಆರ್ಥಿಕತೆಯನ್ನು ಆದರ ಉನ್ನತ-ಬೆಳವಣಿಗೆಯ ಹಾದಿಗೆ ಹಿಂದಿರುಗಿಸುವ ಭರವಸೆಯನ್ನು ಈಗಾಗಲೇ ನೀಡಿವೆ. ಕೋವಿಡ್‌ನ ನಿರ್ಗಮನವು ಆಶಾದಾಯಕ ಬೆಳವಣಿಗೆಯಾಗಿ ಸ್ಥಿರಗೊಳ್ಳಲಿ ಎಂದು ಹಾರೈಸಬೇಕು. ಸರಕಾರಿ ಸಂಸ್ಥೆಗಳ ಖಾಸಗೀಕರಣ ಮತ್ತು ಆದಾಯವು ಘೋಷಿತ ರೀತಿಯಲ್ಲಿ ಮುಂದುವರಿದರೆ, ಉದ್ಯೋಗ ಸೃಷ್ಟಿ ಮತ್ತು ವೇಗವರ್ಧಿತ ಬೆಳವಣಿಗೆಯ ನಿರೀಕ್ಷೆಗಳು ಮತ್ತಷ್ಟು ಉತ್ತಮಗೊಳ್ಳುತ್ತವೆ. ಈ ಸುಧಾರಣಾ ಕಾರ್ಯಕ್ರಮಗಳ ಮಿಶ್ರಣದಲ್ಲಿ ಕಾಣೆಯಾಗಿರುವ ಏಕೈಕ ಅಂಶವೆಂದರೆ ವಾಣಿಜ್ಯ ಉದಾರೀಕರಣ ಹಾಗೂ ಆಡಳಿತ. ಪ್ರಧಾನಿ ಆವರು ಮುಂಬರುವ ಬಜೆಟ್‌ನಲ್ಲಿ ವ್ಯಾಪಾರ ಉದಾರೀಕರಣದ ಉದಾತ್ತ ಕಾರ್ಯಕ್ರಮಗಳನ್ನು ಘೋಷಿಸಿದರೆ, ಅದು ಎರಡು ಪ್ರಮುಖ ಉದ್ದೇಶಗಳನ್ನು ಸಾಧಿಸಬಹುದು. ಒಂದು, ಇದು ಮೇಲಿನ 4 ಸುಧಾರಣೆಗಳ ಇಳುವರಿಯನ್ನು ಹೆಚ್ಚು ಸುಧಾರಿಸುತ್ತದೆ. ಭಾರತವನ್ನು ಎರಡಂಕಿಯ ಜಿಡಿಪಿ ಬೆಳವಣಿಗೆಯ ಪಥದತ್ತ ನೂಕುತ್ತದೆ. ಮತ್ತು ಎರಡನೆಯದಾಗಿ, ಕೃಷಿ ಕಾನೂನುಗಳ ರದ್ದತಿಯ ಹಿನ್ನೆಲೆಯಲ್ಲಿ ಈಗ ಸೃಷ್ಟಿಯಾಗಿರುವ, ಆರ್ಥಿಕ ಸುಧಾರಣೆಗಳು ದೇಶದಲ್ಲಿ ಹಿನ್ನಡೆ ಕಾಣುತ್ತಿವೆ ಎಂಬ ಆತಂಕವನ್ನು ಹೋಗಲಾಡಿಸುತ್ತದೆ.

ಉದ್ಯಮದತ್ತ ಸ್ಪಷ್ಟಸಂಕೇತ: ಉದ್ಯಮ ಕ್ಷೇತ್ರ ಬಿಕ್ಕಟ್ಟಿನಲ್ಲಿದೆ. ಇದರತ್ತ ಕೆಲವು ನಾವು ಗಮನ ನೀಡಿದ್ದೇವೆ ಎಂಬುದನ್ನು ಮನನ ಮಾಡುವುದಕ್ಕಾಗಿ ಕೆಲವು ಸ್ಪಷ್ಟಸಂಕೇತಗಳನ್ನು ಉದ್ಯಮ ಸಮೂಹದತ್ತ ಕಳುಹಿಸಬೇಕಾದ ಆಗತ್ಯವಿದೆ.

ಮುಂಬರುವ ಬಜೆಟ್‌ನಲ್ಲಿ ಲಭ್ಯವಿರುವ ಎರಡೂ ಮಾರ್ಗಗಳ ಮೂಲಕ ಆಮದು ಉದಾರೀಕರಣದ ಕಾರ್ಯಕ್ರಮವನ್ನು ಘೋಷಿಸಬೇಕಾಗುತ್ತದೆ. 2 ಮಾರ್ಗಗಳಲ್ಲಿ ಮೊದಲನೆಯದಾಗಿ, 1991-92 ಮತ್ತು 2007-08ರ ನಡುವೆ ನಾವು ಮಾಡಿದಂತೆ ಹಂತಹಂತವಾಗಿ ಹೆಚ್ಚಿನ ಕನ್ವಮ್ ಸುಂಕಗಳನ್ನು ಇಳಿಸಬೇಕು. ಇದು ಏರಿಕೆಯ ಸಂದರ್ಭದಲ್ಲಿ ಸರಕಾರದ ಹೊಂದಿದ್ದ ನಿರ್ದಿಷ್ಟ ಉದ್ದೇಶವನ್ನು ತನ್ನಿಂತಾನೇ ವಿವರಿಸುತ್ತದೆ. ಯಾಕೆಂದರೆ ಹೆಚ್ಚಿನ ಆಮದು ಸುಂಕಗಳು ಯಾವುದೇ ದೇಶದ ಬೊಕ್ಕಸಕ್ಕೆ ನೆರವಾಗಬಹುದು, ಆದರೆ ಆಂತರಿಕ ಮಾರುಕಟ್ಟೆಯನ್ನು ಹೆಚ್ಚು ಕಾಲ ಸುಸ್ಥಿತಿಯಲ್ಲಿ ಇಡಲಾರವು. ಹೆಚ್ಚಿನ ಸುಂಕದ ಕಾರಣದಿಂದ ಆಗುವ ವ್ಯಾಪಾರ ಹಿಂದೆಗೆತವು ದೂರಕಾಲಿಕವಾಗಿ ಕೆಟ್ಟ ಪರಿಣಾಮವನ್ನೇ ಉಂಟುಮಾಡುತ್ತದೆ.

ಮುಕ್ತ ವ್ಯಾಪಾರ ಒಪ್ಪಂದಗಳು (ಎಫ್‌ಟಿಎಗಳು) ವ್ಯಾಪಾರ ಉದಾರೀಕರಣಕ್ಕೆ ಎರಡನೇ ಮಾರ್ಗವಾಗಿದೆ. ಯುರೋಪಿಯನ್ ಯೂನಿಯನ್ ಮತ್ತು ಬ್ರಿಟನ್‌ನಂತಹ ವ್ಯಾಪಾರ ಪಾಲುದಾರರೊಂದಿಗೆ ಅಂತಹ ಒಪ್ಪಂದಗಳ ಮಾತುಕತೆಯ ಆಕ್ರಮಣಕಾರಿ ಕಾರ್ಯಕ್ರಮವನ್ನು ಬಜೆಟ್ ರೂಪಿಸಬೇಕು. ವ್ಯಾಪಾರ ಒಪ್ಪಂದಗಳು ಈಗ ಸ್ಪಷ್ಟ ಆರ್ಥಿಕ ಕಾರಣಗಳಿಗಾಗಿ ಮಾತ್ರವಲ್ಲದೆ ಭೂ-ರಾಜಕೀಯ, ವ್ಯೂಹಾತ್ಮಕ ಕಾರಣಗಳಿಗಾಗಿಯೂ ಆಗತ್ಯವಾಗಿವೆ. ಅಮೆರಿಕವನ್ನೇ ನೋಡಿ. ತೈವಾನ್‌ನನ್ನು ಚೀನಾದ ಬಾಯಿಯಿಂದ ರಕ್ಷಿಸುವ ಆದರ ಸಂಕಲ್ಪ ದುರ್ಬಲಗೊಂಡಿದೆ. ಮತ್ತು ಆಸ್ಟ್ರೇಲಿಯಾಕ್ಕೆ ಪರಮಾಣು ಜಲಾಂತರ್ಗಾಮಿ ನೌಕೆಗಳನ್ನು ಮಾರಾಟ ಮಾಡುವ ಪ್ರಕ್ರಿಯೆಯಲ್ಲಿ ಅಮೆರಿಕದ ಅಧ್ಯಕ್ಷ ಜೋಸೆಫ್ ಬೈಡೆನ್ ಆಷ್ಟೇನೂ ಆಸಕ್ತಿ ಮಹಿಸಲಿಲ್ಲ. ಇದು ಆಸ್ಟ್ರೇಲಿಯಾದ ಕೋಪಕ್ಕೆ ಕಾರಣವಾಯಿತು. ಮಾತ್ರವಲ್ಲ ಆಸ್ಟ್ರೇಲಿಯಾ ಈ ಭಾಗದಲ್ಲಿ ಅಮೆರಿಕದ ಬಹುಕಾಲದ ಗೆಳೆಯ ನಾಗಿತ್ತು. ಹೀಗಿರುವಾಗ, ಭಾರತವು ಅಮೆರಿಕವನ್ನು ಭಾರಿ ವಿಶ್ವಾಸಾರ್ಹ ಕಾರ್ಯತಂತ್ರದ ಪಾಲುದಾರನಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಇದು ಸೂಚಿಸುತ್ತದೆ. ಆದ್ದರಿಂದ ನಾವು ಯುರೋಪ್ ಒಕ್ಕೂಟದ ಜೊತೆಗೆ ನೇತುವೆಗಳನ್ನು ನಿರ್ಮಿಸಲು ಪ್ರಾರಂಭಿಸುವುದು ವಿವೇಕಯುತವಾಗಿದೆ. ಅದೃಷ್ಟವಶಾತ್, ಈ ಹಂತದಲ್ಲಿ ಯುರೋಪ್ ಒಕ್ಕೂಟ ಚೀನಾದಿಂದ ದೂರವಿರಲು ಉತ್ಸುಕವಾಗಿದೆ. ನಾವು ಈ ಅವಕಾಶವನ್ನು ಕಳೆದುಕೊಳ್ಳಬಾರದು.

ಲೇಖಕರು ಭಾರತೀಯ ಆರ್ಥಶಾಸ್ತ್ರಜ್ಞರು

01-12-2021 Vk Pg 01